195

ಸದರೀ ಮೈನರಾದ ಕೃಷ್ಣಪ್ಪ ಪೆರಫ' ವೆಂಕಟರಂಗಯ್ಯನಿಗೆ ಭಾವ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಜಿಲ್ಲೇ ಸ್ಥಳದ ಅಹೋಬಲಾಚಾರ್ರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಯೆ ಆರ್ಜಿ ಕೊಟ್ಟು ಇರುತ್ತಾನೆ. ಸದರೀ ಆರ್ಜಿ ಹಿಯರಿಂಗ್ ಬಗ್ಯೆ 1890ನೇ ಇಸವಿ ಮಾರ್ಚಿ ತಾರೀಖು 14ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

1890ನೇ ಇಸವಿ ಫಿಬ್ರವರಿ ತಿಂಗಳು 20 ನೇ ತಾರೀಖಿನಲ್ಲಿಕೋರ್ಟು ಮೊಹರ್‌ನವ್ಮ್ಕ ದಸ್ತಖತ್ತೊಹನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 15ನೇ ಫಿಬ್ರವರಿ 1890.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

1. ಮೈಸೂರ ಮೆ|| ದಿವಾನ್‌ಸಾಹೆಬರವರ ಹುಕುಂ ಬವೋಜೀಜ್ ಹಾಸನ ಡಿಸ್ಟ್ರಿಕ್ಟಿನ ಪೈಕಿ ಮಂಜರಾಬಾದ್ ತಾಲ್ಲೂಕಿನಲ್ಲಿ ಇರುವ ಮಾರನಹಳ್ಳಿ ಘಾಟಿಯಲ್ಲಿ ಟೋಲ್ ಗೇಟ್‌ಯೆಂಬ ಸುಂಕದ ಕಟ್ಟೀವಳಗೆ ಸ್ 1890ನೇ ಇಸವಿ ಏಪ್ರಿಲ್ ಮಾಹೆ 1ನೇ ಮುರ್ತುಂ ಲಾಗಾಯತು 1891ನೇ ಇಸವಿ ಮಾರ್ಚಿ 31ರ ನರಿವಿಗೆ ಸುಂಕ ವಸೂಲ್ ಮಾಡುವ ಸ್ವಾತಂತ್ರ್ಯವನ್ನು ಸ್ 1890ನೇ ಇಸವಿ ಮಾರ್ಚ್ ತಾರೀಖು 23ರಲ್ಲಿ ಸಕಲೇಶಪುರದ ಪೊಕ್ತಾಮಿನಲ್ಲಿ ತಾಲ್ಲೂಕು ಕಚ್ಚೇರಿ ವಳಗೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ವಸೂಲಿ ಹಕ್ಕನ್ನ ಕೊಂಡುಕೊಳ್ಳುವ ಕಂಟ್ರಾಕ್ಟ್‌ದಾರನು ಇದಕ್ಕೆ ಲಗ್ಗತ್ತಾಗಿರುವ ಷೆಡ್ಯೂಲಿನಲ್ಲಿ ನಮೂದಾಗಿರುವ ದರಗಳ ಮೇರಿಗೇನೆ ಟೋಲ್ ವಸೂಲ್ ಮಾಡಬೇಕು. ಮತ್ತು ಸ್ 1876ನೇ ಇಸವಿ ನವಂಬರ್ 4ನೇ ಮುರ್ತುಂ 274ನೇ ನಂಬಕುಳ್ಳ ಲೇಟ್ ಚೀಫ್ ಕಮ್ಮಿಸ್ಸರ್ ಸಾಹೆಬರವರ ನೋಟಿಫಿಕೇರ್ಷನ್‌ನಲ್ಲಿ ಫಾಯಿಷ್ ಆಗಿರುವ ರೂಲ್ಸ್ ಪ್ರಕಾರ ನಡದುಕೊಳ್ಳಬೇಕು.

3. ಜಡ ದರಖಾಸ್ತ್ಗಾಗಲಿ ಯಾವ ದರಖಾಸ್ತ್ನುಗಲಿ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹೆಬರವರು ಅಧಿಕಾರ ಪುಟ್ಟಿಸಿಕೊಂಡಿರುತ್ತಾರೆ.

4. ಯಾರ ದರಖಾಸ್ತು ಅಂಗೀಕರಿಸಲ್ಪಡುತ್ತದೋ ಅವನು ಕೂಡ್ಲೆ ದರಖಾಸ್ತು ಮೊಬಲಗಿನಲ್ಲಿ 4ರಲ್ಲಿ ಬಂದು ಅಂಕ ಮೊಬಲಗನ್ನ ಅಡ್ವಾನಸಾಗಿ ಠೇವಣಿ ಯಿಟ್ಟು ಬಾಕಿ ಮೊಬಲಗನ್ನ 1890ನೇ ಇಸವಿ ಏಪ್ರಿಲ್ 20ರ ಲಾಗಾಯತು ಸಮನಾದ 6 ಕಿಸ್ತುಗಳಾಗಿ ಪ್ರತಿ ತಿಂಗಳ 20ನೇ ತಾರೀಖಿಗೆ ಪಾವತಿ ಮಾಡಬೇಕು. ದರಖಾಸ್ತುದಾರನು ಪ್ರತಿ ಮಾಹೆವಾರಿ ಕಿಸ್ತು ಮೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಲಾಯಖಾದ ಒಬ್ಬನನ್ನ ಜಾಮೀರ್ ಕೊಡಬೇಕು. ಸದರೀ ಜಾಮೀರ್ ದಸ್ತೈವಜು ಕ್ರಮವಾಗಿ ರಿಜಸ್ಟರ್ ಮಾಡಿಸಿ ಹಾಜರ್ ಪಡಿಸಬೇಕು.

5. ಠೇವಣಿ ಯಿಡದೆ ಇದ್ದರೆ ಅಥವಾ ಜಾಮೀರ್ ಕೊಡದೇ ಇದ್ದರೆ ದರಖಾಸ್ತುದಾರನಿಗೆ ಸುಕಸಾನುಕರವಾಗಿ ಕಂಟ್ರಾಕ್ಟು 2ನೇ ಹರಾಜು ಮೂಡಲ್ಪಡುವದು. ಕಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಕಿಯಾದ ಮೊಬಲಗಿಗೆ ಪಾವತಿ ತಾರೀಖಿನವರಿಗೆ ತಿಂಗಳು ಬಂದಕ್ಕೆ ರೂಪಾಯಿ 1ಕ್ಕೆ 1 ಕಾಸಿನಂತೆ ಬಡ್ಡಿ ವಸೂಲ್ ಮಾಡಲ್ಪಡುವದು. ಮತ್ತು ಡೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತತೋರುವ ಪ್ರಕಾರ ಅಥವಾ ಜಾಮೀರ್‌ದಾರನ ಅಪೇಕ್ಷೆ ಪ್ರಕಾರ ಕಂಟ್ರಾಕ್ಟು 2ನೇ ಹರಾಜ್ ಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು. ಆದರಿಂದ ಯೇನಾದರೂ ನಷ್ಟ ಸಂಭವಿಸಿದರೆ ಅದು ಕಂಟ್ರಾಕ್ಟುದಾರನಿಂದ ಅಥವಾ ಜಾಮೀರ್‌ದಾರನಿಂದ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡತಕ್ಕದ್ದು.

6. ದರಖಾಸ್ತು ಮೊಬಲಗು ಕಿವಾಯಿ 4 ಮತ್ತು 5ನೇ ಕಲಂಗಳಲ್ಲಿ ನಮೂದಾಗುವ ಪರತ್ತಿಗೆ ಒಳಪಟ್ಟು ಖಜಾನೆಗೆ ಸಲಾಯಿಸುವ ಸದರೀ ಕಂಟ್ರಾಕ್ಟ್ ಮೊಬಲಗಿನ ರೂಪಾಯಿ 1ಕ್ಕೆ ಬಂದು ಆಣೆಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಕಂಟ್ರಾಕ್ಟುದಾರನು ಬದ್ಧನಾಗಿಯಿರುತ್ತಾನೆ.

7. ಪ್ರತಿ ದಿನದ ಟೋಲ್ ವಸೂಲ್ ತೋರಿಸುವ ನಿಜವಾದ ಮತ್ತು ಕರಾರುವಾಕವಾದ ಲೆಕ್ಕವನ್ನ ಯಿಡಲು ಸಹ ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ತರ ಇನ್‌ಸ್ಪೆಕಷನ್ನಿಗೆ ಲೆಕ್ಕ ವಳಗಾಗಿ ಯಿರತಕ್ಕದ್ದು.

8. ಕಂಟ್ರಾಕ್ಟುದಾರನು ಆಮದ ರಫ್ತಿನ ಲೆಕ್ಕ ಯಿಡಲೋಸ್ಕರ ಒಬ್ಬಂದಿ ಅಂದರೆ ಮೊತ್ಸದ್ದಿ ಖರ್ಚನ್ನು ವಹಿಸಲು ಬದ್ಧನಾಗಿರತಕ್ಕದ್ದು.

9. ಮತ್ತು ಗವರ್ನಮೆಂಟ್ ಟೋಲ್ ಮನೆ ಮತ್ತು ಗೇಟನ್ನು ಕಂಟ್ರಾಕ್ಟುದಾರನು ಉಪಯೋಗಿಸತಕ್ಕದ್ದು. ಮತ್ತು ಅವುಗಳನ್ನ ಆತನು ಪೂರಾ ದುರಸ್ತಿನಲ್ಲಿ ಯಿಟ್ಟುಕೊಂಡಿರತಕ್ಕದ್ದು.

10. ಕಂಟ್ರಾಕ್ಟುದಾರನು ಪ್ರತಿ ತಿಂಗಳ ಗುರ್ತು ತಾರೀಖಿನಲ್ಲಿ ಹಿಂದಣ ತಿಂಗಳ ಟೋಲ್ ವಸೂಲ್ ಲೆಕ್ಕವನ್ನ ಮಂಜರಾಬಾದ್ ತಾಲ್ಲೂಕು ಕಚ್ಚೇರಿಗೆ ಕಳುಹಿಸತಕ್ಕದ್ದು.

11. ದರಗಳಪಟ್ಟಿ ಈ ಕೆಳಗೆ ವಿವರಿಸಿ ಯಿದೆ.

		ರೂ.	ಆ.	ಪೈ.
1.	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2.	ಪ್ರತಿ ಎರಡು ಡಿಟೋ	1	0	0
3.	ಪ್ರತಿ ಯಕ್ಕಾ ಮೇಲೂ	0	4	0
4.	ಸ್ಪ್ರಿಂಗ್‌ಯಾನೆ ಬಿಲ್ಲಿನಮೇಲೆ ಇರುವ ಬಾಡಿಗೆ ಭಂಡಿ ಪ್ರತಿ ಬಂದಕ್ಕೆ	0	2	0
5.	ಎಂಟು ಯತ್ತುಗಳಿಂದ ಕೋಣಗಳಿಂದ ಕುದುರೆಗಳಿಂದ ಟಾಕಣಗಳಿಂದ ಕತ್ತೆಗಳಿಂದ ಯಾ ಹೇಸರ ಕತ್ತೆಗಳಿಂದ ಯಳೆಯಲ್ಪಟ್ಟ ಮತ್ತು ಬಿಲ್ಲಿನಮೇಲೆ ಇಲ್ಲದ ಪ್ರತಿ ಗಾಡಿ ನ ಬಾಡಿಗೆ ಭಂಡಿ ವಂದಕ್ಕೆ ಭರ್ತಿಯಾಗಿದ್ದರೆ	1	8	0
6.	ಡಿಟೋ ಡಿಟೋ ಭರ್ತಿ ಯಿಲ್ಲದಿದ್ದರೆ	0	8	0
7.	ಆರು ಯತ್ತುಗಳು ವಗೈರೆಗಳಿಂದ ಯಳೆಯಲ್ಪಟ್ಟ ಗಾಡಿ ನ ಬಾಡಿಗೆ ಭಂಡಿ ವಂದಕ್ಕೆ ಭರ್ತಿಯಾಗಿದ್ದರೆ	0	12	0
8.	ಡಿಟೋ ಡಿಟೋ ಭರ್ತಿ ಯಿಲ್ಲದಿದ್ದರೆ	0	6	0
9.	ನಾಲ್ಕು ಯತ್ತುಗಳಿಂದ ಕೋಣಗಳಿಂದ ಕುದುರೆಗಳಿಂದ ಟಾಕಣಗಳಿಂದ ಕತ್ತೆಗಳಿಂದ ಯಾ ಹೇಸರ ಕತ್ತೆಗಳಿಂದ ಯಳೆಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ ..	0	8	0
10.	ಡಿಟೋ ಡಿಟೋ ಭರ್ತಿ ಯಿಲ್ಲದಿದ್ದರೆ	0	4	0
11.	ಯರಡು ಯತ್ತುಗಳಿಂದ ಕೋಣಗಳಿಂದ ಕುದುರೆಗಳಿಂದ ಟಾಕಣಗಳಿಂದ ಕತ್ತೆಗಳಿಂದ ಯಾ ಹೇಸರ ಕತ್ತೆಗಳಿಂದ ಯಳೆಯಲ್ಪಟ್ಟ ಗಾಡಿ ಯಾ ಬಾಡಿಗೆ ಭಂಡಿ ವಂದಕ್ಕೆ ಭರ್ತಿಯಾಗಿದ್ದರೆ ..	0	4	0
12.	ಡಿಟೋ ಡಿಟೋ ಭರ್ತಿ ಯಿಲ್ಲದಿದ್ದರೆ	0	2	0
13.	ಕೋಣಗಳು ಯಾ ಯತ್ತುಗಳು ರಾಸು 1ಕ್ಕೆ ಹೊರಿಸಲ್ಪಟ್ಟು ಯಿದ್ದರೆ	0	1	0
14.	ಡಿಟೋ ಡಿಟೋ ಹೊರೆ ಇಲ್ಲದಿದ್ದರೆ	0	0	3
15.	ಪ್ರತಿ ಆನೆಗೂ	1	8	0
16.	ಪ್ರತಿ ವಂಟೆಗೂ ಹೊರೆ ಹೊರಿಸಲ್ಪಟ್ಟದ್ದಕ್ಕೆ	0	8	0
17.	ಡಿಟೋ ಡಿಟೋ ಹೊರೆ ಯಿಲ್ಲದಿದ್ದರೆ	0	4	0
18.	ಡಿಟೋ ಕುದುರೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ..	0	1	6
19.	ಹೊರೆ ಯಿಲ್ಲದ ಯಾ ಹಿಡಿದುಕೊಂಡು ಹೋಗುವ ಪ್ರತಿ ಕುದುರೆಗೂ ..	0	0	9
20.	ಪ್ರತಿ ಹಟ್ಟು ಯಾ ಹೇಸರಕತ್ತೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿಮಾಡಲ್ಪಡುತ್ತಿದ್ದರೆ.	0	0	9
21.	ಡಿಟೋ ಹೊರೆ ಯಿಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ ..	0	0	6
22.	ಪ್ರತಿ ಕತ್ತೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ..	0	0	6
23.	ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ	0	0	1
24.	ಪ್ರತಿ ಕುರಿ ಮೇಕೆ ಯಾ ಹಂದಿಗೂ	0	0	1
25.	ಯಂಟು ಬೋಯಿಗಳೊಡನೆ ಪ್ರತಿ ಡೋಲಿ ಪಾಲಕಿ ಯಾ ಟಾಂಜಾನಿಗೂ	1	0	0
26.	ಅರು ಬೋಯಿಗಳೊಡನೆ ಡಿಟೋ	0	12	0
27.	ನಾಲ್ಕು ಬೋಯಿಗಳೊಡನೆ ಡಿಟೋ	0	8	0
28.	ಇಬ್ಬರು ಬೋಯಿಗಳೊಡನೆ ಡಿಟೋ	0	4	0

ನಷೆದು ಬರುವ ಮೂರ್ಗಸ್ತರ ಮೇಲೆ ಟೋಲ್ ವಸೂಲ್ ಮಾಡತಕ್ಕದ್ದಲ್ಲ.

ಪಿ. ಯರ್. ಪೂರ್ಣಯ್ಯ,
ಡಿಪ್ಯೂಟಿ ಕಮ್ಮಿಷನರ್.

ನಗರ ಡಿವಿಜ಼ನ್ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 19.

ಮೃತಪಟ್ಟ ಹರಿಹರದ ಭಿಮರಾಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ರಂಗರಾವ್ ಮೃತಪಟ್ಟ ಸದರೀ ಹರಿಹರದ ಭಿಮರಾಯನಿಗೆ ಖಾಸಾಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರುಕನಬಾ ಪೊಟ್ಟರಪ್ಯಾಟೆ ಸ್ಥಳದ ರಂಗರಾಯನು ಡಿಟೋ ತಾಲ್ಲೂಕು ಕಸಬು ಪೊಟ್ಟರಪ್ಯಾಟೆ ವಾಸಸ್ಥನಾಗಿ ಮೃತಪಟ್ಟ ಹರಿಹರದ ಭೀಮರಾಯನ ಜೆಂದಗಿಬಗ್ಯಾಗಿ ಬರತಕ್ಕ 1000 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟ್‌ಗೆ ಖಾಯಿಷ್ಮಮಾಡಿರುತ್ತಾನೆ.